<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

ಸಿ.ಸಿ ಃ **378/2020**

ಸಾಕ್ಷಿದಾರರ ಹೆಸರು ಃ ಮನೀಷ್

ತಂದೆಯ ಹೆಸರು ಃ ಲಕ್ಷ್ಮಣ್ ಗೌಡ

ವಯಸ್ಸು ಃ **41** ವರ್ಷ

ಉದ್ಯೋಗ ಃ ಪಿಡಿಓ , ನಾಗಲಾಪುರ ಗ್ರಾಮ ಪಂಚಾಯ್ತಿ

ವಾಸಸ್ಥಳ ಃ ನ ರಾ ಪುರ

ಸಿ.ಡಬ್ಲ್ಯೂ- **11**

ಪಿ.ಡಬ್ಲ್ಯೂ- **7**

ದಿನಾಂಕಃ **26.10.2024** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು 2018 ರಿಂದ 2021 ವರೆಗೆ ಪಿ ಡಿ ಓ ಆಗಿ ನಾಗಲಾಪುರ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 03.05.2020 ರಂದು ನ ರಾ ಪುರ ಪೊಲೀಸರು ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ಮನವಿ ಸಲ್ಲಿಸಿದ್ದು, ಈ ಸಂಬಂಧ ನಾನು ದಿನಾಂಕಃ 26.05.2020 ರಂದು ವರದಿ ಮತ್ತು ದಾಖಲೆಯನ್ನು ನೀಡಿರುತ್ತೇನೆ.

ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8, ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9, ಸಾಕ್ಷಿಯ ಸಹಿಯನ್ನು ನಿಪಿ-9(ಎ) , ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಕೆ ಎಸ್ ಎಸ್ ವಕೀಲರಿಂದ ಃ</u>

ನಾನು ನೀಡಿರುವ ವರದಿಯಲ್ಲಿ ನ ರಾ ಪುರ ಪೊಲೀಸರ ಪತ್ರ ಸಂಃ 52/2020 ದಿನಾಂಕಃ 02.05.2020 ಎಂದು ನಮೂದು ಇರುತ್ತದೆ ಎಂದರೆ ಸರಿ. ಪತ್ರ ಸಂಃ 52/2020 ಎಂದು ಯಾವುದೇ ಪತ್ರ ಇರುವುದಿಲ್ಲ ಎಂದರೆ ಕೈ ತಪ್ಪಿನಿಂದ ಆಗಿರಬಹುದು. ನಾನು ಕೃತ್ಯ

ಸ್ಥಳಕ್ಕೆ ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಕಚೇರಿಯ ದಾಖಲೆಗಳನ್ನು ನೋಡಿ ವರದಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಸ್ವರೂಪದ ಆಸ್ತಿ ಎಂದು ನಿಪಿ-10 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಅದು ಬೇಡಿಕೆ ಸಂಖ್ಯೆ ಮನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನನ್ನ ದಾಖಲೆಯಲ್ಲಿ ಮನೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಶರತ್ ಎನ್ನುವವರ ಮನೆ ಅಸ್ತಿತ್ವದಲ್ಲಿರುವುದಿಲ್ಲ, ಪೊಲೀಸರು ನಾವು ಸರ್ಕಾರಿ ನೌಕರರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ವರದಿ ನೀಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ